**ದಿನಾಂಕ:03-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಜಿ.ಆರ್.ಎಸ್. ರವರಿಂದಃ-**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀಮತಿ ಪಿ.ಎಂ.ಡಿ. ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು , ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ಪ್ರತಿವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

ನನಗೆ ವಾದಿಯು ಹಾಜರುಪಡಿಸಿದ ದಾಖಲೆಗಳ ಬಗ್ಗೆ ಮಾಹಿತಿ ಇದೆ , ವಾದಿಯರ ಹೆಸರುಗಳು ದಾವಾ ಸ್ವತ್ತಿನ ಉತಾರ ನಿಪಿ-1 ರಲ್ಲಿ ಮಾಲೀಕರು ಎಂದು ನಮೂದಾಗಿದೆ ಎಂದರೆ ಸಾಕ್ಷಿ ಹೆಸರು ಇದೆ, ಆದರೆ ಮಾಲೀಕರಲ್ಲ ಎನ್ನುತ್ತಾರೆ. ವಾದಿಯರು ದಾವಾ ಸ್ವತ್ತಿನ ಮಾಲೀಕರಲ್ಲ ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ ಎಂದರೆ ಸಾಕ್ಷಿಯು ದಾಖಲೆಗಳನ್ನು ನನ್ನ ವಕೀಲರ ಬಳಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ , ಹಾಜರುಪಡಿಸುತ್ತೇನೆ ಎನ್ನುತ್ತಾರೆ. ನಿಪಿ-2 ರಲ್ಲಿ ವಾದಿಯರ ಹೆಸರು ಮಾಲೀಕರೆಂದು ತೋರಿಸಲಾಗಿದೆ ಎಂದರೆ ಸಾಕ್ಷಿ ಮಾಲೀಕರೆಂದು ಉತಾರದಲ್ಲಿ ತೋರಿಸಲಾಗಿದೆ , ಆದರೆ ಕಬ್ಜೆಯಲ್ಲಿ ನಾವು ಇದ್ದೇವೆ ಎನ್ನುತ್ತಾರೆ. ನೀವು ಕಬ್ಜೆಯಲ್ಲಿದ್ದೀರಿ ಎಂದು ತೋರಿಸಲು ಕಾಗದ ಪತ್ರಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಉತಾರ ಮತ್ತು ಫೋಟೋಗಳನ್ನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ಪ್ರತಿವಾದಿ ಪರ ಹಾಜರುಪಡಿಸಿದ ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿ ಉತಾರ ಇದೆಯೇ ಎಂದರೆ ಸಾಕ್ಷಿ ದಾಖಲೆಗಳನ್ನು ನೋಡಿ ಅದರಲ್ಲಿ ಉತಾರ ಇಲ್ಲ ,

ಪೋಟೋಗಳು ಇವೆ ಎನ್ನುತ್ತಾರೆ. ನೀವು ಹಾಜರುಪಡಿಸಿದ ಪೋಟೋಗಳು ದಾವಾ ಆಸ್ತಿಗೆ ಸಂಬಂಧಿಸಿದ ಪೋಟೋಗಳು ಅಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಸದರಿ ಪೋಟೋಗಳು ನನ್ನ ಸ್ವತ್ತಿನ ಪೋಟೋಗಳು ಎನ್ನುತ್ತಾರೆ.

**2.** ನಿಡಿ-8 ದಾವಾ ಸ್ವತ್ತಿನ ಉತಾರ ಅಲ್ಲ ಎಂದರೆ ಸಾಕ್ಷಿ ನಮ್ಮ ಸ್ವತ್ತಿನ ಉತಾರ ಎನ್ನುತ್ತಾರೆ. ನಿಡಿ-8 ಸರ್ವೆ ನಂ.39/3 ಕ್ಕೆ ಸಂಬಂಧಿಸಿದ್ದು, ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸಾಕ್ಷಿ ನಮ್ಮ ಸ್ವತ್ತಿನ ಉತಾರ ಎನ್ನುತ್ತಾರೆ. ನಿಡಿ-9 ಸರ್ವೆ ನಂ.40/1 ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿ. ನಿಡಿ-12 ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸಾಕ್ಷಿ ದಾವಾ ಸ್ವತ್ತು ನಮಗೆ ಸಂಬಂಧಿಸಿದ್ದಲ್ಲ ಎನ್ನುತ್ತಾರೆ. ಸರ್ವೆ ನಂ.40/30 ಕ್ಕೆ ಮೊದಲು ವಾದಿಯರ ಅಜ್ಜ ಡೊಂಗರು ರವರು ಮಾಲೀಕರಾಗಿದ್ದರು ಎಂದರೆ ಸರಿ. ವಾದಿಯರ ಅಜ್ಜ ಡೊಂಗರು ರವರು ಮರಣ ಹೊಂದುವವರಿಗೂ ಅವರೇ ದಾವಾ ಸ್ವತ್ತನ್ನು ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿ ಅವರೂ ಮಾಡುತ್ತಿದ್ದರು, ನಾವೂ ಸಾಗುವಳಿ ಮಾಡುತ್ತಿದ್ದೆವು ಎನ್ನುತ್ತಾರೆ. ನಾವು ಸಾಗುವಳಿ ಮಾಡುತ್ತಿದ್ದೆವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಡೊಂಗರು ರವರ ಮರಣಾನಂತರ ಅವರ ಮಗ ಲಕ್ಷ್ಮಣ ಡೊಂಗರು ದೇವರಮನಿ ರವರು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನಾವು ಉಳುಮೆ ಮಾಡುತ್ತಿದ್ದೆವು ಎನ್ನುತ್ತಾರೆ. ಲಕ್ಷ್ಮಣ ರವರ ಮಕ್ಕಳು ವಾದಿಯರು ಎಂದರೆ ಸರಿ. ಲಕ್ಷ್ಮಣ ರವರ ಮರಣಾನಂತರ ವಾದಿಯರು ದಾವಾ ಸ್ವತ್ತಿನ ಕಬ್ಜೆಯಲ್ಲಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ನಾವೇ ಕಬ್ಜೆಯಲ್ಲಿದ್ದೇವೆ ಎನ್ನುತ್ತಾರೆ. ನಾವೇ ಕಬ್ಜೆಯಲ್ಲಿದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಕಬ್ಜೆಯಲ್ಲಿದ್ದೀರಿ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ವಕೀಲರಿಗೆ ಕೊಟ್ಟಿದ್ದೇನೆ ಎನ್ನುತ್ತಾರೆ.

**3.** ದಾವಾ ಆಸ್ತಿಯಲ್ಲಿರುವ ಬಾವಿಯನ್ನು ವಾದಿಯರೇ ತಮ್ಮ ಖರ್ಚಿನ ಮೂಲಕ ಕಟ್ಟಿದ್ದಾರೆ ಎಂದರೆ ಸರಿಯಲ್ಲ, ನಾವೇ ಕಟ್ಟಿದ್ದೇವೆ ಎನ್ನುತ್ತಾರೆ. ನಾವೇ ಕಟ್ಟಿದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಕಟ್ಟಿದ್ದೀರಾ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ವಕೀಲರಿಗೆ ಕೊಟ್ಟಿದ್ದೇನೆ ಎನ್ನುತ್ತಾರೆ. ವಕೀಲರಿಗೆ ಕೊಟ್ಟಿದ್ದೇನೆ ಎಂದು ಹೇಳುವ ದಾಖಲೆಗಳನ್ನು ಮುಂದಿನ ದಿನಾಂಕದಂದು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ವಾದಿಯರು ಸದರಿ ಬಾವಿಯನ್ನು ತೆಗೆಸಲು ಮಲಪ್ರಭ ಗ್ರಾಮೀಣ ಬ್ಯಾಂಕಿನಲ್ಲಿ ಸಾಲ ಪಡೆದಿದ್ದಾರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಾದಿಯರು ಸಾಲ ಪಡೆದ ಬಗ್ಗೆ ನಿಪಿ-1 ರಲ್ಲಿ ನಮೂದಿಸಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**